# ನಿಧಿ

■ ನರಸಿಂಹಾರೆಡ್ಡಿ ಯಂಕಾಮೋಳ
ಕಲೆ: ಸಂತೋಷ್ ಸಸಿಹಿತ್ಲು



ಒಂದೂರಲ್ಲಿ ರಂಗಣ್ಣ ಮತ್ತು ಅವನ ತಾಯಿ ಇಬ್ಬರೂ ವಾಸವಾಗಿದ್ದರು. ಚಿಕ್ಕವನಿದ್ದಾಗಲೇ ತಂದೆಯನ್ನು ಕಳೆದುಕೊಂಡ ರಂಗನನ್ನು ಬಹಳ ಮುದ್ದು ಮಾಡಿ ಬೆಳೆಸಿದ್ದಳು ಅವನ ತಾಯಿ. ರಂಗ ಬೆಳೆದು ದೊಡ್ಡವನಾಗುತ್ತಲೇ ಆ ಅತಿ ಪ್ರೀತಿ ಆ ತಾಯಿಯ ಪಾಲಿನ ಶಾಪವಾಯಿತು. ಕೆಲಸ ಮಾಡದೇ ಊರಲ್ಲಿ ಉಂಡಾಡಿ ಗುಂಡನ ಹಾಗೆ ಸುತ್ತಾಡುತ್ತಾ ಇರೋದೇ ಅವನ ದಿನಚರಿಯಾಯಿತು. ಕೂಲಿನಾಲಿ ಮಾಡಿ ಅವನಿಗೆ ಮೂರು ಹೊತ್ತು ಉಣ್ಣಲು ಹಾಕುತ್ತಿದ್ದಳು. ತಾನು ಸತ್ತ ಮೇಲೆ ಅವನು ಹೇಗೆ ಬದುಕುತ್ತಾನೆ ಎಂಬ ಚಿಂತೆಯಲ್ಲೇ ಕೊರಗುತ್ತಿದ್ದಳು. ತನ್ನ ಮಗನಿಗೆ ಕೆಲಸ ಮಾಡಿ ಸಂಪಾದಿಸಿ ಬದುಕುವ ಬುದ್ಧಿ ಕೊಡು ದೇವರೇ ಎಂದು ದಿನಾಲು ಬೇಡಿಕೊಳ್ಳುತ್ತಿದ್ದಳು. ಆ ಬುದ್ಧಿ ಬರುವ ದಿನವೂ ಬಂತು. ಆಗಷ್ಟೇ ಊಟಮಾಡಿ ಮನೆ ಹೊರಗಿನ ಕಟ್ಟೆಗೆ ಕುಳಿತಿದ್ದ ರಂಗ. ಭಿಕ್ಷೆಗಾಗಿ ಸಾಧುವೊಬ್ಬರು ಮನೆ ಮುಂದೆ ಬಂದು ಕೂಗಿದರು. ಅವರ ಮಾತನ್ನು ಕೇಳಿಯೂ ಕೇಳದ ಹಾಗೆ ಕುಳಿತಿದ್ದ ರಂಗ. ನನಗೆ ಅಡುಗೆಮನೆಯಲ್ಲಿ ಕೆಲಸವಿದೆ, ನೀನು ಭಿಕ್ಷೆ ಹಾಕು ರಂಗ ಎಂದು ಅಮ್ಮನ ಕಡೆಯಿಂದ ಕೂಗು. ನನಗೆ ಅಷ್ಟು ಶಕ್ತಿಯಿಲ್ಲ ನೀನೇ ಬಂದು ನೀಡು ಎಂದು ರಂಗ ಇಲ್ಲಿಂದಲೇ ಕೂಗಿದ. ಇವನ ಪರಿಸ್ಥಿತಿ ಅರ್ಥ ಮಾಡಿಕೊಂಡರು ಸಾಧುಗಳು. ಒಳಗಿನಿಂದ ರಂಗನ ತಾಯಿ ಬಂದು ಭಿಕ್ಷೆ ನೀಡಿ ಹೋದರು. ಸಾಧುಗಳು ನನಗೆ ಭಿಕ್ಷೆ ನೀಡಿದ ಸಲುವಾಗಿ ನಿಮಗೊಂದು ಗುಟ್ಟು ಹೇಳುತ್ತೇನೆ ಕೇಳಿ ತಾಯಿ ನಿಮ್ಮ ಮನೆಯ ಆ ಮೂಲೆಯಲ್ಲಿ ಬಂಗಾರದ ನಿಧಿ ಇದೆ ತೋಡಿ ತೆಗೆದುಕೊಳ್ಳಿ ಎಂದು ಹೇಳಿ ಹೊರಟುಹೋದರು. ನಿಧಿ ಎಂದ ಗಳಿಗೆಯೇ ರಂಗನ ಕಿವಿ ನೆಟ್ಟಗಾದವು. ಅಮ್ಮನ ಹತ್ತಿರಹೋಗಿ ಅಮ್ಮ ಆ ಸಾಧು ಹೇಳಿದ ಹಾಗೆ ನಮ್ಮ ಮನೆಯ ಮೂಲೆಯಲ್ಲಿ ನಿಜವಾಗಿಯೂ ನಿಧಿ ಇರಬಹುದಾ ಎಂದನು. ‘ಅವರು ತಮ್ಮ ಭಿಕ್ಷೆ ಸಲುವಾಗಿ ಏನಾದರೊಂದು ಸುಳ್ಳು ಹೇಳ್ತಾರೆ ಮಗಾ ಈ ಬಡವಿಯ ಮನೆಯಲ್ಲಿ ನಿಧಿ ಎಲ್ಲಿಂದ ಬರ್ತದ’ ಎಂದಳು. ಆದರೂ ರಂಗನಿಗೆ ಆಸೆ ತೀರಲಿಲ್ಲ. ನೋಡಿಯೇ ಬಿಡೋಣ ಎಂದು ಮರುದಿನ ಮನೆಯ ಮೂಲೆಯಲ್ಲಿ ತೋಡಲು ಶುರುಮಾಡಿದ. ತಾಯಿ ಬೇಡವೆಂದರೂ ಸಿಟ್ಟಾಗಿ ಕಳುಹಿಸಿದ. ತೋಡಿದ... ತೋಡಿದ ಇನ್ನೂ ನಿಧಿಯ ಪತ್ತೇನೇ ಇಲ್ಲ. ಆದರೂ ನಿಧಿಯ ಮೇಲಿನ ಆಸೆ ತೀರಲಿಲ್ಲ. ಮರುದಿನವೂ ಮುಂದುವರೆಸಿದ.

ಸುಮಾರು ಹೊತ್ತಾದ ಮೇಲೆ ಟಣ್ ಎನ್ನುವ ಶಬ್ದ ಬಂತು. ನಿಧಿ ಇನ್ನು ಸಿಕ್ತು ಎಂದುಕೊಂಡ ರಂಗ. ನೋಡಿದರೆ ತಾಮ್ರದ ಕಪ್ಪಾದ ಪಾತ್ರೆಯಿತ್ತು, ಅದರ ಬಾಯಿಗೆ ಬಟ್ಟೆ ಕಟ್ಟಲಾಗಿತ್ತು.ತೆರೆದು ನೋಡಿದರೆ ಬರೀ ಕಲ್ಲಿದ್ದಲು ಇದ್ದವು. ಬರೀ ಕಲ್ಲಿದ್ದಲು ಸಿಕ್ಕ ಸಲುವಾಗಿ ರಂಗನಿಗೆ ಸಿಟ್ಟು ಬಂತು. ಒಂದು ಬಾವಿಗಾಗುವಷ್ಟು ತಗ್ಗ ತೋಡಿದ್ದ. ಇಷ್ಟು ಶ್ರಮ ಪಡಲು ಮುಖ್ಯ ಕಾರಣ ಆ ಸಾಧು ಎಂದು ತಾಮ್ರದ ಪಾತ್ರೆಯನ್ನು ತೆಗೆದುಕೊಂಡು ಸಾಧುವನ್ನು ಹುಡುಕುತ್ತಾ ಹೊರಟ. ಒಂದೆರಡು ಊರು ದಾಟಿದ ಮೇಲೆ, ಒಂದು ಗಿಡದ ಕೆಳಗೆ ಅದೇ ಸಾಧು ಧ್ಯಾನಕ್ಕೆ ಕುಳಿತಿದ್ದರು. ರಂಗ ಹೋಗಿ ಸಿಟ್ಟಿನಿಂದ ಸಾಧುಗಳೇ ನೀವು ಸುಳ್ಳು ಯಾಕೆ ಹೇಳಿದಿರಿ ಎಂದ. ಏನು ಸುಳ್ಳು? ಅದೇ ನಮ್ಮ ತಾಯಿಗೆ ಮನೆಯ ಮೂಲೆಯಲ್ಲಿ ನಿಧಿ ಇದೆ ಅಂತ ಹೇಳಿದ್ರಿ ತೋಡಿ ನೋಡಿದರೆ ಈ ಪಾತ್ರೆ ತುಂಬಾ ಕಲ್ಲಿದ್ದಲು ಇದೆ ಎಂದು ಆ ಪಾತ್ರೆ ತೋರಿಸಿದ.